ಜೆಎಸ್‌ಎಸ್ ಮಹಾವಿದ್ಯಾಪೀಠ
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
ಊಟಿ ರಸ್ತೆ, ಮೈಸೂರು - 570 025, ಕರ್ನಾಟಕ

☎ : 0821-2548236, 2548380, Fax: 0821-2548238, E-mail: jssautonomous@gmail.com, Website: www.jsscacs.edu.in

28.03.2014

# ಪ್ರಕಟಣೆಯ ಕೃಪೆಗಾಗಿ

ನಗರದ ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನಲ್ಲಿ ಯುಜಿಸಿ ಪ್ರಾಯೋಜಿತ "ಸಮಾಜ ಕಾರ್ಯ ಮತ್ತು ಹೆಚ್‌ಐವಿ /ಏಡ್ಸ್" ಎಂಬ ವಿಷಯಾಧಾರಿತ ಎರಡು ದಿನದ ಸಮ್ಮೇಳನವನ್ನು ಶ್ರೀ. ಅಶೋಕಾನಂದ- ಪ್ರತಿಪಾದಕ ನಿರ್ದೇಶಕರು, ಕರ್ನಾಟಕ ಆರೋಗ್ಯ ಅಭಿವೃದ್ಧಿ ಟ್ರಸ್ಟ್, ಬೆಂಗಳೂರು ಇವರು ದಿನಾಂಕ: 28.03.2014 ರಂದು ಉದ್ಘಾಟಿಸಿದರು. ಕಾಲೇಜಿನ ಸ್ನಾತಕೋತ್ತರ ಸಮಾಜಕಾರ್ಯ ವಿಭಾಗವು ಆಶಾಕಿರಣ ಆಸ್ಪತ್ರೆಯ ಸಹಯೋಗದೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸಿದೆ.

ಶ್ರೀ. ಅಶೋಕಾನಂದ ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೆಚ್‌ಐವಿ /ಏಡ್ಸ್ ಸೋಂಕಿತರು ತಮ್ಮ ಸೋಂಕಿನ ಬಾಧೆಯೊಂದಿಗೆ ಸಾಮಾಜಿಕ ಕಳಂಕ ಮತ್ತು ತಾರತಮ್ಯತೆಯನ್ನು ಅನುಭವಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಸಮಾಜ ಕಾರ್ಯಕರ್ತರು ಸಾಮಾಜಿಕ ಪರಿವರ್ತನಾ ಮಧ್ಯವರ್ತಿಗಳಾಗಿ ಕೆಲಸಮಾಡಬೇಕಾಗಿದೆ ಎಂದರು. ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಔಷಧೀಯ ವಿಭಾಗದ ಡಾ. ಎಸ್ ರಾಜೇಂದ್ರ ಪ್ರಸಾದ್ ರವರು ಆಶಯ ನುಡಿಯನ್ನು ನುಡಿಯುತ್ತಾ ಭಾರತ ಮತ್ತು ಜಾಗತಿಕ ಮಟ್ಟದಲ್ಲಿನ ಹೆಚ್‌ಐವಿ /ಏಡ್ಸ್‌ನ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲಿದರು. ಮುಂದುವರೆದು ಭಾರತದಲ್ಲಿ ಶೇಖಡ ಐವತ್ತರಷ್ಟು ಸೋಂಕು ಕಡಿಮೆಯಾಗಿದ್ದರೂ ಪರಿಸ್ಥಿತಿಯನ್ನು ಉತ್ತಮಗೊಳಿಸಿ ಅದರ ಮಟ್ಟವನ್ನು ಸೊನ್ನೆಗೆ ತರಬೇಕಾಗಿದೆ ಎಂದರು.

...2

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರೊ. ಟಿ ಡಿ ಸುಬ್ಬಣ್ಣನವರು, ನಿರ್ದೇಶಕರು, ಕಾಲೇಜು ಶಿಕ್ಷಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು ಇವರು ಹೆಚ್‌ಐವಿ / ಏಡ್ಸ್‌ನ ವಿಚಾರದಲ್ಲಿ ಸಮಾಜ ಕಾರ್ಯಕರ್ತರು, ಸ್ವಯಂಸೇವಾ ಸಂಘಟನೆಗಳು ಮತ್ತು ವೈದ್ಯಕೀಯ ವೃತ್ತಿಪರರ ಜವಾಬ್ದಾರಿಯನ್ನು ನೆನಪಿಸಿದರಲ್ಲದೆ, ಸಮಾಜವು ಹೆಚ್‌ಐವಿ /ಏಡ್ಸ್ ಸೋಂಕಿತರ ಬಗ್ಗೆ ಮಾನವೀಯ ಭಾವನೆಗಳನ್ನು ಬೆಳಸಿಕೊಳ್ಳಬೇಕಾಗಿ ಕರೆ ನೀಡಿದರು.

ಪ್ರೊ. ಬಿ ವಿ ಸಾಂಬಶಿವಯ್ಯ, ಮುಖ್ಯ ನಿರ್ವಹಣಾಧಿಕಾರಿಗಳು, ಜೆಎಸ್‌ಎಸ್ ಕಾಲೇಜು ಆವರಣ, ಮೈಸೂರು ಇವರು ಅತಿಥಿಗಳನ್ನು ಸ್ವಾಗತಿಸಿದರು ಸ್ನಾತಕೋತ್ತರ ಸಮಾಜಕಾರ್ಯ ವಿಭಾಗದ ಮುಖ್ಯಸ್ಥರಾದ ಡಾ. ಎಂ ಪಿ ಸೋಮಶೇಖರ್ ರವರು ಸಮ್ಮೇಳನದ ಉದ್ದೇಶವನ್ನು ಸಭೆಗೆ ವಿವರಿಸಿದರು ಮತ್ತು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ ಬಿ ಮಲ್ಲಿಕಾರ್ಜುನ ಪಂಡಿತ್ ರವರು ವಂದಿಸಿದರು. ಕು.ಶ್ವೇತಾ ಕಶ್ಯಪ್ ರವರು ಪ್ರಾರ್ಥಿಸಿದರೆ ಡಾ. ಅನುಪಮ ರಮೇಶ್ ರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಕಾರ್ಯಕ್ರಮದಲ್ಲಿ ನೂರೈವತ್ತಕ್ಕೂ ಹೆಚ್ಚಿನ ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಸ್ವಯಂಸೇವಾ ಸಂಘದ ಪ್ರತಿನಿಧಿಗಳು ಮತ್ತು ವೈದ್ಯಕೀಯ ವೃತ್ತಿಪರರು ಭಾಗವಹಿಸಿದ್ದರು.

ಪ್ರಾಂಶುಪಾಲರು

(ಪ್ರೊ. ಎಂ ಬಿ ಮಲ್ಲಿಕಾರ್ಜುನ ಪಂಡಿತ್)

ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು-570 025.

ಗೆ

ಸಂಪಾದಕರು / ಮುಖ್ಯಸ್ಥರು

--------------------

--------------------

ಮೈಸೂರು.

